ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 956/2024

(ಪ್ರಾಸಾ-2 ಚಾಸಾ-2)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 10.06.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಮುನೇಗೌಡ ಕೆ. ಎಲ್. |
| ತಂದೆಯ ಹೆಸರು | - | ಲಕ್ಷ್ಮಯ್ಯ |
| ವಯಸ್ಸು | - | 30 ವರ್ಷ, |
| ಉದ್ಯೋಗ | - | ಗಾರ್ಮೆಂಟ್ ನಲ್ಲಿ ಕೆಲಸ |
| ವಾಸ | - | ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಪರಿಶಿಷ್ಟ ಜಾತಿಗೆ ಸೇರಿದ ಮಾದಿಗ ಸಮುದಾಯಕ್ಕೆ ಸೇರಿದವನು. ಚಾಸಾ-1 ರಮ್ಯಶ್ರೀ ನನ್ನ ಹೆಂಡತಿ.

2. ಸೆಪ್ಟಂಬರ್ 2024 ಕ್ಕಿಂತ ಮೊದಲು ನಾಲ್ಕು ವರ್ಷ ನಾನು ಮತ್ತು ನನ್ನ ಹೆಂಡತಿ ದೊಡ್ಡಬಳ್ಳಾಪುರದ ಮುನಿವೆಂಕಟಪ್ಪರವರಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ಇದ್ದೆವು. ಆಗ ಆರೋಪಿತರು ನಮ್ಮ ನೆರೆಹೊರೆಯವರಾಗಿದ್ದರು. ಆರೋಪಿತರು ಒಕ್ಕಲಿಗ ಸಮುದಾಯುಕ್ಕೆ ಸೇರಿದವರು.

3. ದಿಃ12.09.2024 ಕ್ಕಿಂತ ಮೂರು ತಿಂಗಳು ಮೊದಲಿನಿಂದಲೂ ಆರೋಪಿತರು ನಮಗೆ, ಮಾದಿಗ ಸೂಳೆ ಮಕ್ಕಳು, ನಿಮ್ಮ ಮುಖ ನೋಡಿದರೆ ನಮಗೆ ಹೋದ ಕೆಲಸ ಆಗುವುದಿಲ್ಲ ಎಂದು ಅವಮಾನ ಮಾಡಿ ಜಾತಿ ನಿಂದನೆ ಮಾಡುತ್ತಿದ್ದರು ಮತ್ತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು.

4. ನಾನು ರಾತ್ರಿ ಸಮಯದಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸಕ್ಕೆ ಹೋದಾಗ ಮನೆಯಲ್ಲಿ ನನ್ನ

ಹೆಂಡತಿ ಒಬ್ಬಳೇ ಇರುತ್ತಿದ್ದಳು. ಆಗ 1 ನೇ ಆರೋಪಿ ಆಕೆಗೆ, ನಿಮ್ಮಂತ ಕೀಳು ಜಾತಿಯವರು 50 100 ಕ್ಕೆಲ್ಲಾ ಮಲಗಲು ಬರುತ್ತಾರೆ, ನೀನು ಬಾ ಎಂದು ಕೈ ಸನ್ನೆ ಮಾಡುತ್ತಿದ್ದನು ಎಂದು ನನ್ನ ಹೆಂಡತಿ ನನಗೆ ತಿಳಿಸಿರುತ್ತಾಳೆ.

5. ದಿಃ12.09.2024 ರಂದು ರಾತ್ರಿ ಸುಮಾರು 8.00-08.30 ಘಂಟೆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ನಮ್ಮ ಮನೆಯಲ್ಲಿದ್ದಾಗ, 2 ನೇ ಆರೋಪಿ ನಮ್ಮ ಮನೆಯ ಕೆಳಗೆ ನಿಂತುಕೊಂಡು ನಮಗೆ, ಮಾದಿಗ ಸೂಳೆ ಮಕ್ಕಳೇ, ನೀವು ಮನೆ ಖಾಲಿ ಮಾಡಿ, ನಿಮ್ಮಿಂದ ನಮಗೆ ದರಿದ್ರ ಹೊಡೆಯುತ್ತದೆ, ನಿಮ್ಮನ್ನು ನೋಡಿದರೆ ನಮ್ಮ ಕೆಲಸಗಳು ಆಗುತ್ತಿಲ್ಲ, ಎಂದು ಹೇಳಿದರು.

6. ಆರೋಪಿತರು ಆ ರೀತಿ ಹೇಳಿದ್ದನ್ನು ಕೇಳಿಸಿಕೊಂಡು ನಾನು ಮತ್ತು ನನ್ನ ಹೆಂಡತಿ 2 ನೇ ಆರೋಪಿಯನ್ನು ಕೇಳಲು ಮನೆಯಿಂದ ಹೊರಗೆ ಬಂದು ಕೆಳಗೆ ಇಳಿದೆವು. ಆಗ ಆರೋಪಿತರು, ಮಾದಿಗ ಸೂಳೆ ಮಗನೇ ನಿಮ್ಮಂತ ಕೀಳು ಜಾತಿಯವರು ನಮ್ಮನ್ನು ಮುಟ್ಟಿ ಮಾತನಾಡಿಸಲು ಬಂದಿದ್ದೀರಾ ಎಂದು ಬೈದರು.

7. ಘಟನೆಯಾಗುವ 10 ವರ್ಷಗಳ ಹಿಂದೆ ಅಪಘಾತದಲ್ಲಿ ನನ್ನ ಬಲಗಾಲು ಮುರಿತವಾಗಿದ್ದು ರಾಡ್ ಅಳವಡಿಸಲಾಗಿದೆ. 1 ನೇ ಆರೋಪಿ ದೇವರಾಜ್ ನನ್ನ ಬಲಗಾಲಿಗೆ ಕಾಲಿನಿಂದ ಒದ್ದರು. ನನ್ನ ಬಲಗೈಯ ಮಧ್ಯದ ಬೆರಳಿಗೆ ಕಚ್ಚಿ ಉಗುರು ಕಿತ್ತುಹಾಕಿದರು. ಅದರ ಪರಿಣಾಮ ನನ್ನ ಗಂಡನ ಬಲಗೈನ ಮಧ್ಯ ಬೆರಳಿನ ಉಗುರಿಗೆ ಹಾನಿಯಾಗಿರುತ್ತದೆ. ಆರೋಪಿತರು ನನ್ನ ಕತ್ತನ್ನು ಹಿಡಿದು ತಿರುಗಿಸಿದರು. ಆ ಪರಿಣಾಮ ನನ್ನ ಕುತ್ತಿಗೆಗೆ ನೋವಾಗಿದ್ದು ಈಗ ಇತ್ತೀಚೆಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುತ್ತೇನೆ.

8. ಘಟನೆಯ ನಂತರ ನಾನು ಮತ್ತು ನನ್ನ ಹೆಂಡತಿ ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಆಸ್ಪತ್ರೆಯಲ್ಲಿ ನಾವು ಚಿಕಿತ್ಸೆ ಪಡೆದಿರುತ್ತೇವೆ. ಗಲಾಟೆಯಲ್ಲಿ ಆರೋಪಿತರು ನನ್ನ ಹೆಂಡತಿಗೂ ಸಹ ಹೊಡೆದಿರುತ್ತಾರೆ.

(ಈ ಹಂತದಲ್ಲಿ ಎಸ್ ಪಿ ಪಿ ರವರು ಸಾಕ್ಷಿಯು ಇತ್ತೀಚೆಗೆ ಶಸ್ತ್ರ ಚಿಕಿತ್ಸೆ ಮಾಡಿಸಿದ ದಾಖಲೆಯನ್ನು ಹಾಜರುಪಡಿಸುವುದಾಗಿ ಹೇಳಿದ್ದು ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೊಹಮ್ಮದ್ ಮುಜೀರ್ ಉಲ್ಲಾ ಸಿ. ಜಿ.)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು